**ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಹಾನಗಲ್ಲ.**

**ಸಿ.ಸಿ ನಂಬರ್ಃ 406/2024**

ಪಿರ್ಯಾದಿಃ ಸರ್ಕಾರ, ಪ್ರತಿನಿಧಿಸುವವರು,
ಆಡೂರ ಪೊಲೀಸ್ ಠಾಣಾ ಪೋಲೀಸರು.

ವಿರುದ್ಧ

ಆರೋಪಿತರುಃ
1. ಶಿವಬಸಪ್ಪ ತಂದೆ ಚನ್ನಬಸಪ್ಪ ಮಲಕಣ್ಣನವರ
ವಯಸ್ಸುಃ 48 ವರ್ಷ,

2. ಶಂಕರಲಿಂಗಪ್ಪ ತಂದೆ ಶಿವಬಸಪ್ಪ ಮಲಕಣ್ಣನವರ
ವಯಸ್ಸುಃ 29 ವರ್ಷ,

3. ವೀರೇಶ ತಂದೆ ಶಿವಬಸಪ್ಪ ಮಲಕಣ್ಣನವರ
ವಯಸ್ಸುಃ 27 ವರ್ಷ,

6. ಶರಣ್ ತಂದೆ ಶಂಕರಪ್ಪ ಮಲಕಣ್ಣನವರ
ವಯಸ್ಸುಃ 40 ವರ್ಷ,

7. ಶಂಕರಪ್ಪ ತಂದೆ ಮಲ್ಲಪ್ಪ ಮಲಕಣ್ಣನವರ
ವಯಸ್ಸುಃ 70 ವರ್ಷ,

8. ಗದಿಗೆಪ್ಪ ತಂದೆ ಮಲ್ಲಪ್ಪ ಕುಂದೂರ
ವಯಸ್ಸುಃ 50 ವರ್ಷ,

9. ಶಂಭು ತಂದೆ ಗದಿಗೆಪ್ಪ ಮಲಕಣ್ಣನವರ
ವಯಸ್ಸುಃ 40 ವರ್ಷ,

10. ರುದ್ರಪ್ಪ ತಂದೆ ಈರಪ್ಪ ಮಲಕಣ್ಣನವರ
ವಯಸ್ಸುಃ 25 ವರ್ಷ,

ಎಲ್ಲಾ ಆರೋಪಿತರ ವಾಸ
ಸಾಃ ಶಂಕರಿಕೊಪ್ಪ , ತಾಃ ಹಾನಗಲ್ಲ.

**ದೋಷಾರೋಪಣೆ**

ನಾನು ಶ್ರೀ. ಜನಾರ್ಧನ ಎಸ್ ಕೆ, ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಹಾನಗಲ್ಲ, 1 ರಿಂದ 3, 6 ರಿಂದ 10 ನೇ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

1. ಆಡೂರ ಪೋಲಿಸ್ ಠಾಣೆಯ ವ್ಯಾಪ್ತಿಯ ಶಂಕರಿಕೊಪ್ಪ ಗ್ರಾಮದಲ್ಲಿ ಆರೋಪಿಯಾದ ನೀವು ನಿಮಗೆ ಸೇರಿದ ರಿ ಸ ನಂಃ 7/23 ರ ಪೈಕಿ 13 ಗುಂಟೆ ಜಮೀನಿನನ್ನು ಚಾಸಾ-1 ರವರಿಗೆ ಒಂದು ವರ್ಷದ ಹಿಂದೆ ಖರೀದಿ ಕೊಟ್ಟಿದ್ದು, ಆದರೆ ಸದರಿ ಜಮೀನಿಗೆ ಓಡಾಡಲು ಆರೋಪಿತರಾದ ನೀವು ತಕರಾರು ಮಾಡುತ್ತಾ ಬಂದಿದ್ದು, ಸದರಿ ಹಿನ್ನಲೆಯಲ್ಲಿ ದಿನಾಂಕಃ 02-11-2023 ರಂದು ಮಧ್ಯಾಹ್ನ 12-30 ಗಂಟೆಯ ಸಮಯದಲ್ಲಿ ಚಾಸಾ-1 ರವರು ಚಕ್ಕಡಿ ತೆಗೆದುಕೊಂಡು ಜಮೀನಿಗೆ ಹೋಗುತ್ತಿದ್ದಾಗ, ಆರೋಪಿತರಾದ ಅಪರಾಧ ಮಾಡುವ ಉದ್ದೇಶದಿಂದ, ವಿಧಿ ವಿರುದ್ಧ ಅಕ್ರಮ ಕೂಟ ಕಟ್ಟಿಕೊಂಡು ಅಕ್ರಮ ಕೂಟದ ಸದಸ್ಯರಾಗಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 143 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ?

2. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ವಿಧಿ ವಿರುದ್ಧ ಅಕ್ರಮ ಕೂಟ ಕಟ್ಟಿಕೊಂಡು ನಿಮ್ಮ ಏಕೋದ್ದೇಶವನ್ನು ಸಾಧಿಸುವ ಸಲುವಾಗಿ ಚಾಸಾ-1 ಮತ್ತು ಚಾಸಾ-4 ರವರ ಜೊತೆಗೆ ಗಲಾಟೆ ಮಾಡಿ ಬಲ ಪ್ರಯೋಗ ಮಾಡಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 147 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ?

3. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಅಪರಾದ ಮಾಡುವ ಉದ್ದೇಶದಿಂದ ವಿಧಿ ವಿರುದ್ಧ ಅಕ್ರಮ ಕೂಟ ಕಟ್ಟಿಕೊಂಡು ನಿಮ್ಮ ಏಕೋದ್ದೇಶವನ್ನು ಸಾಧಿಸುವ ಸಲುವಾಗಿ ಆರೋಪಿತರ ಪೈಕಿ 1 ರಿಂದ 3 ಮತ್ತು 6 ನೇ ಆರೋಪಿತರಾದ ನೀವು ಕೂಡಿಕೊಂಡು ಚಾಸಾ-1 ರವರಿಗೆ ಕೈಗಳಿಂದ ಮೈಕೈಗೆ ಹಲ್ಲೆ ಮಾಡಿದ್ದಲ್ಲದೇ, ನೆಲಕ್ಕೆ ಎತ್ತಿ ಒಗೆದು ತಲೆಗೆ ಸಾಮಾನ್ಯ ಸ್ವರೂಪದ ನೋವು ಉಂಟು ಮಾಡಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 323 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ?

4. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಸೇರಿಕೊಂಡು ಅಪರಾಧ ಮಾಡುವ ಉದ್ದೇಶದಿಂದ ವಿಧಿ ವಿರುದ್ಧ ಅಕ್ರಮ ಕೂಟವನ್ನು ಕಟ್ಟಿಕೊಂಡು ಬಂದು, ಆಗ ಜಗಳ ಬಿಡಿಸಲು ಬಂದ ಚಾಸಾ-4 ರವರಿಗೆ ಆರೋಪಿತರ ಪೈಕಿ 7 ರಿಂದ 10 ನೇ ಆರೋಪಿತರಾದ ನೀವು ಕೂಡಿಕೊಂಡು ತಲೆಯ ಕೂದಲು ಹಿಡಿದು ಎಳೆದಾಡಿ, ಮೈ ಮೇಲಿನ ಬಟ್ಟೆಗಳನ್ನು ಎಳೆದಾಡಿ ಹರಿಯಲು ಪ್ರಯತ್ನಿಸಿ ಆಕೆಯ ವ್ಯಕ್ತಿತ್ವಕ್ಕೆ ಚುಚಿ ಬರುವ ರೀತಿಯಲ್ಲಿ ವರ್ತಿಸಿರುತ್ತೀರಿ. ಈ ರೀತ್ಯ ನೀವು ಭಾರತೀಯ ದಂಡ ಸಂಹಿತೆ ಕಲಂ 354 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

5. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಸೇರಿಕೊಂಡು ಅಪರಾಧ ಮಾಡುವ ಉದ್ದೇಶದಿಂದ ವಿಧಿ ವಿರುದ್ಧ ಅಕ್ರಮ ಕೂಟ ಕಟ್ಟಿಕೊಂಡು ನಿಮ್ಮ ಏಕೋದ್ದೇಶವನ್ನು ಸಾಧಿಸುವ ಸಲುವಾಗಿ ಚಾಸಾ-1 ಮತ್ತು ಚಾಸಾ-5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವರನ್ನು ಶಾಂತಿ ಭಂಗವನ್ನುಂಟು ಮಾಡಲು ಉದ್ದೇಶಪೂರ್ವಕವಾಗಿ ಪ್ರೇರೇಪಿಸಿರುತ್ತೀರಿ. ಈ ರೀತ್ಯ ನೀವು ಭಾರತೀಯ ದಂಡ ಸಂಹಿತೆ ಕಲಂ 504 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

6. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿಯಾದ ನೀವು ಸೇರಿಕೊಂಡು ಅಪರಾಧ ಮಾಡುವ ಉದ್ದೇಶದಿಂದ ವಿಧಿ ವಿರುದ್ಧ ಅಕ್ರಮ ಕೂಟ ಕಟ್ಟಿಕೊಂಡು ನಿಮ್ಮ ಏಕೋದ್ದೇಶವನ್ನು ಸಾಧಿಸುವ ಸಲುವಾಗಿ ಚಾಸಾ-1 ಮತ್ತು ಚಾಸಾ-5 ರವರಿಗೆ ಇವತ್ತಲ್ಲಾ ನಾಳೆ ನಿಮ್ಮನ್ನು ಕೊಂದು ಬಿಡುತ್ತೇವೆ ಎಂದು ಜೀವದ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ಸಹಕಲಂ 149 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

ಸದರಿ ಮೇಲೆ ಹೋರಿಸಿದ ದೋಷಾರೋಪಣೆಯನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿದ್ದರಿಂದ ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದು ಎಂದು ಆದೇಶ ಮಾಡಿರುತ್ತೇನೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ಆರೋಪಗಳು ನಿಮಗೆ ತಿಳಿದಿದೆಯೋ?

ಆರೋಪಿಗಳ ಉತ್ತರಃ

ಪ್ರಃ 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೊ?

ಆರೋಪಿಗಳ ಉತ್ತರಃ

(ಆರೋಪಿತರಿಗೆ ದಿನಾಂಕಃ 13-12-2024 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ಹಾನಗಲ್ಲ
ದಿನಾಂಕಃ 13-12-2024.

ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ
ನ್ಯಾಯಾಲಯ, ಹಾನಗಲ್ಲ.

ಆರೋಪಿತರ ಸಹಿಗಳುಃ

1 ನೇ ಆರೋಪಿಯ ಸಹಿಃ

2 ನೇ ಆರೋಪಿಯ ಸಹಿಃ

3 ನೇ ಆರೋಪಿಯ ಸಹಿಃ

6 ನೇ ಆರೋಪಿಯ ಸಹಿಃ

7 ನೇ ಆರೋಪಿಯ ಸಹಿಃ

8 ನೇ ಆರೋಪಿಯ ಸಹಿಃ

9 ನೇ ಆರೋಪಿಯ ಸಹಿಃ

10 ನೇ ಆರೋಪಿಯ ಸಹಿಃ